ಇ) ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುತ್ತವೆ. ಕರ್ನಾಟಕ ಪೌರಸಭೆಗಳ ಕಾಯ್ದೆ 1964ರನ್ವಯ ಸೂಕ್ತ ಕ್ರಮ ಜರುಗಿಸಲಾಗುವುದು.

ಸಿ.ಆರ್.ಎಫ್. ಅನುದಾನ

650(700); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) 2012–13, 2013–14, 2014–2015ನೇ ಸಾಲಿನ ಯೋಜನೆಯಡಿ ರಾಜ್ಯಕ್ಕೆ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಪ್ರತ್ಯೇಕವಾಗಿ ವಿವರಗಳನ್ನು ಒದಗಿಸುವುದು)?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) 2012–13 ರಿಂದ 2014–15 ರವರೆಗೆ ಸಿ.ಆರ್.ಎಫ್. ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಅನುದಾನ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ವರ್ಷ	ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)
1	2012–13	ರೂ. 138.29
2	2013–14	ರೂ. 138.06
3	2014–15	ರೂ. 160.14

ರಸ್ತೆ ಕಾಮಗಾರಿ ಬಗ್ಗೆ

651(1334); ಶ್ರೀ ಚಿಕ್ಕಮಾದು ಎಸ್. (ಹೆಚ್.ಡಿ. ಕೋಟೆ)

ಅ) ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಯಾಗಿ ತೆಗೆದುಕೊಂಡ ರಸ್ತೆ ಕಾಮಗಾರಿಗಳು ಎಷ್ಟು;

ಆ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ನಿಯಮಾವಳಿಯಂತೆ 1 ಕಿ.ಮೀ ರಸ್ತೆಯನ್ನು ಪ್ರಾರಂಭಿಸಿ ಪೂರ್ತಿಗೊಳಿಸಲು ಇರುವ ಸಮಯ ಎಷ್ಟು;

ಇ) ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ 2012–13, 2013–14ನೇ ಸಾಲಿನ ರಸ್ತೆ ಕಾಮಗಾರಿಗಳು (PMGSY) ರಡಿ ಒಬ್ಬನೇ ಗುತ್ತಿಗೆದಾರರಿಂದ ಪಡೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಒಬ್ಬನೇ ಗುತ್ತಿಗೆದಾರನಿಂದ ಎಲ್ಲಾ ರಸ್ತೆ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದರೆ, ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ನಿಗದಿತ ಸಮಯದೊಳಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ರಸ್ತೆ ಕಾಮಗಾರಿ ಪೂರ್ತಿಗೊಳಿಸದೆ ಸಾರ್ವಜನಿಕ ಸಂಚಾರಕ್ಕೆ ಧಕ್ಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಗುತ್ತಿಗೆದಾರನ ಮೇಲೆ ಸರ್ಕಾರ ಏನು ಕ್ರಮಕೈಗೊಂಡಿದೆ (ಪ್ರತ್ಯೇಕವಾಗಿ ಹೆಚ್.ಡಿ. ಕೋಟೆ ತಾಲ್ಲೂಕು ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 2012–13ನೇ ಸಾಲಿನಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ ಹಾಗೂ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2 ರಡಿ 2013–14ನೇ ಸಾಲಿನಲ್ಲಿ 2 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಅನುಮೋದಿತ ಮೊತ್ತ ರೂ. 1086.92 ಲಕ್ಷಗಳಿದ್ದು, ಡಿಸೆಂಬರ್ 2014ರ ಅಂತ್ಯದವರೆಗೆ ರೂ. 94.11 ಲಕ್ಷ ಖರ್ಚಾಗಿರುತ್ತದೆ. ಕಾಮಗಾರಿ ವಿವರ ಅನುಬಂಧ–1 ರಲ್ಲಿ ನೀಡಿದೆ.

ಆ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ನಿಯಮಾವಳಿಯಂತೆ ಕಾಮಗಾರಿಗಳಿಗೆ ನಿಗದಿಪಡಿಸಿರುವ ರಸ್ತೆಗಳ ಪೂರ್ಣ ಉದ್ದವನ್ನು ಗುತ್ತಿಗೆದಾರರು ಪೂರ್ಣಗೊಳಿಸಲು 9 ತಿಂಗಳ ಕಾಲಾವಕಾಶವನ್ನು ನೀಡಲಾಗುತ್ತದೆ.

ಇ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ 2012–13ನೇ ಸಾಲಿನಲ್ಲಿ ಯಾವುದೇ ಕಾಮಗಾರಿಗಳು ಅನುಮೋದನೆಯಾಗಿರುವುದಿಲ್ಲ.

2013–14ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2 ರಡಿಯಲ್ಲಿ 2 ಕಾಮಗಾರಿಗಳು ಅನುಮೋದನೆಯಾಗಿದ್ದು ಸದರಿ ಕಾಮಗಾರಿಗಳನ್ನು ಬೇರೆ ಬೇರೆ ಗುತ್ತಿಗೆದಾರರಿಗೆ ಟೆಂಡರ್ ಕರಾರಿನ ಮೂಲಕ ವಹಿಸಲಾಗುತ್ತದೆ. ವಿವರ ಅನುಬಂಧ–1ರಲ್ಲಿ ನೀಡಿದೆ.

ಈ) ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2 ರಡಿಯಲ್ಲಿ 2013–14ನೇ ಸಾಲಿನಲ್ಲಿ ಕೈಗೊಂಡ 2 ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ನಿಗದಿತ ಗುತ್ತಿಗೆ ಅವಧಿಯಲ್ಲಿ ಪೂರ್ಣಗೊಳಿಸಲು ಕಾಲಾವಕಾಶವಿದ್ದು, ಈ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ.

ಆದ್ಯಾಗೂ ಅನಿವಾರ್ಯ ಕಾರಣದಿಂದ ಒಂದು ವೇಳೆ ಗುತ್ತಿಗೆದಾರರು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಹೆಚ್ಚಿನ ಅವಧಿಗೆ ಎಸ್.ಬಿ.ಡಿ ನಿಯಮಾವಳಿಯಂತೆ ದಂಡ ವಿಧಿಸಿ ಕಾಲಾವಧಿ ವಿಸ್ತರಣೆ ನೀಡಲಾಗುವುದು ವಿಸ್ತರಣಾ ಅವಧಿಯಲ್ಲಿಯೂ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಟೆಂಡರ್ ನಿಯಮಾವಳಿಯಂತೆ ಆ ಗುತ್ತಿಗೆಯನ್ನು ರದ್ದು ಪಡಿಸಿ ಉಳಿಕೆ ಕಾಮಗಾರಿಗೆ ಮರು ಟೆಂಡರ್ ಕರೆದು ಪೂರ್ಣಗೊಳಿಸಲಾಗುವುದು.

ಅನುಬಂಧ - 1

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ - 2 ರ ರಸ್ತೆ ಕಾಮಗಾರಿಗಳ ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು	ಟೆಂಡರ್ ಸಂಖ್ಯೆ	ಪ್ಯಾಕೇಜ್ ಸಂಖ್ಯೆ	ಕಾಮಗಾರಿಯ ಹೆಸರು	ರಸ್ತೆಯ ಉದ್ದ (ಕಿ.ಮೀಗಳಲ್ಲಿ)	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ಹೆಸರು	ಕಾಮಗಾರಿ ಪ್ರಾರಂಭಿಸಿದ ದಿನಾಂಕ	ಕಾಮಗಾರಿ ಪೂರ್ಣಗೊಳಿಸಬೇಕಾದ ದಿನಾಂಕ	ಡಿಸೆಂಬರ್ - 2014 ರ ಅಂತ್ಯಕ್ಕೆ ವೆಚ್ಚ (ರೂ.ಲಕ್ಷಗಳಲ್ಲಿ)	ಪ್ರಸ್ತುತ ಕಾಮಗಾರಿಯ ಹಂತ
1	ಹೆಚ್.ಡಿ ಕೋಟೆ	ಕೆ.ಎಸ್-22-01	ಕೆ.ಎಸ್-22-90	ಕಬ್ಬಾಳುವಿನಿಂದ - ಹಂಚೀಪುರ ರಸ್ತೆ (MDR) ಮಠಕ್ಕೆ, ಮಾರದಹಳ್ಳಿ ಮತ್ತು ಹೆಗ್ಗಡೂರು ಮಾರ್ಗ	9.60	686.10	742.75	ಶ್ರೀ.ಕೆ.ವಿ.ಚನ್ನಯ್ಯ	12.05.2014	11.02.2015	70.59	ಫಾರ್ಮೇಷನ್ ಮತ್ತು ಸಿಡಿ ಕೆಲಸ ಪ್ರಗತಿಯಲ್ಲಿದೆ
2		ಕೆ.ಎಸ್-22-02	ಕೆ.ಎಸ್-22-91	ಸಂಜಹಳ್ಳಿಯಿಂದ - ಎಂ.ಎಂ. ರಸ್ತೆ (SH) ಮಠಕ್ಕೆ, ಸಕ್ಕರೆಮಂಡಿ ಕ್ರಾಸ್ ಮೂಡಸಾಪುರ ಮಾರ್ಗ	5.61	400.82	427.98	ಶ್ರೀ.ಮಟ್ಟೇಗೌಡ	03.09.2014	02.06.2015	23.52	ಫಾರ್ಮೇಷನ್ ಪೂರ್ಣಗೊಂಡಿದೆ
				ಒಟ್ಟು ಮೊತ್ತ	15.21	1086.92	1170.73				94.11	